ಬಿಡುತ್ತಾನೆ. ಆದ್ದರಿಂದ ಇದನ್ನು ಕೈಬಿಡಿ, ಜಫ್ತಿ ಮಾಡಿಸುವುದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳುತ್ತಾ ನನಗೆ ಅವಕಾಶ ಕೊಟ್ಟ ತಮ್ಮ ಕೃಪೆಗೆ ಅನಂತ ಪ್ರಣಾಮಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೬.೩೦ ಪಿ.ಎಂ.

ಅಧ್ಯಕ್ಷರು.—ಇಲ್ಲಿಗೆ ಆಯವ್ಯಯದ ಮೇಲಿನ ಭಾಷಣಗಳು ಮುಗಿದುವು. ನಾಳೆ ಬೆಳಿಗ್ಗೆ ೧೦ ಗಂಟೆಗೆ ಮುಖ್ಯಮಂತ್ರಿಗಳಿಂದ ಉತ್ತರ. ಈಗ ಅರ್ಧ ಗಂಟೆ ಕಾಲದ ಚರ್ಚೆ.

ಅರ್ಧ ಘಂಟೆ ಕಾಲಾವಧಿಯ ಚರ್ಚೆ

ಗಂಗಾ ಕಲ್ಯಾಣ ಯೋಜನೆ ಬಗ್ಗೆ

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಾನು ೨–೨–೬೭ ರಂದು ಹಾಕಿದ್ದ ೨೬೯ ನೇ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಲೋಕೋಪಯೋಗಿ ಸಚಿವರಿಗೆ ಪ್ರಶ್ನೆ ಕೇಳಿದಾಗ ಗಂಗಾಕಲ್ಯಾಣ ಯೋಜನೆಯ ಬಗ್ಗೆ ೨೮೬ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ, ಇದಕ್ಕೆ ೨೫೦ ಲಕ್ಷ ರೂ.ಗಳು ಅಂದಾಜಾಗಿದೆ ಇದರಲ್ಲಿ ೧೪೮.೮೫ ಲಕ್ಷ ರೂ. ಗಳು ಖರ್ಚಾಗಿದೆ ಇದರ ಅಂದಾಜು ಕೆಲಸ ಪೂರ್ತಿ ಆದರೆ ೧,೦೭೧ ಹೆಕ್ಟೇರ್ಸ್ ನೀರಾವರಿಯಾಗುತ್ತದೆ ಎಂದು ಉತ್ತರ ಕೊಟ್ಟಿದ್ದರು. ಇದರ ಬಗ್ಗೆ ಏಕೆ ಅರ್ಧ ಗಂಟೆ ಚರ್ಚೆಯಾಗಬೇಕು ಎಂದರೆ ೨೮೬ ಕೆಲಸಗಳು ಎಲ್ಲೆಲ್ಲಿ ಆಗಿವೆ ಎಂಬ ವಿವರ ನಮಗೆ ಸಿಕ್ಕಿಲ್ಲ, ಆಷ್ಟು ಕೆಲಸಗಳಲ್ಲಿ ಯಾವುವು ಪೂರ್ಣವಾಗಿವೆ, ಅಪೂರ್ಣವಾಗಿರುವುವು ಎಷ್ಟು ಮತ್ತು ೨೬೦ ಲಕ್ಷ ರೂ.ಗಳ ಅಂದಾಜಿನಲ್ಲಿ ೧.೫ ಕೋಟಿ ಮಾತ್ರ ಖರ್ಚಾಗಿದೆ ಎಂದು ಹೇಳಿದ್ದಾರೆ.

ನಾನು ಅವರನ್ನು ಇದರ ಬಗ್ಗೆ ಎಷ್ಟು ಕೆಲಸ ಪ್ರಾರಂಭವಾಗಿದೆ, ಅದರಲ್ಲಿ ಎಷ್ಟು ಪೂರ್ತಿಯಾಗಿದೆ ಎಷ್ಟು ಅಪೂರ್ಣವಾಗಿದೆ ಹಾಗೂ ಎಷ್ಟು ಯಶಸ್ವಿಯಾಗಿದೆ ಎಂಬ ವಿವರಣೆ ಕೇಳಿ ಬರಬಹುದೆಂದು ನನಗೆ ಇರುವ ಶಂಕೆ ಏನೆಂದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಇದಕ್ಕೆ ಸಹಕಾರ ಕೊಡತ್ತಿಲ್ಲ, ಉದಾಹರಣೆಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಸುಮಾರು ಒಂದು ವರ್ಷದ ಹಿಂದೆ ಪ್ರಾರಂಭವಾಗಿರತಕ್ಕಂತಹ ಗಂಗಾ ಕಲ್ಯಾಣ ಯೋಜನೆಗೆ ಕೆ. ಇ. ಬಿ. ನವರು ಇವತ್ತಿವರೆಗೂ ಕೂಡ ಪವರ್ ಕೊಟ್ಟಿಲ್ಲ ಇದರಿಂದಾಗಿ ಅದು ಇನ್ನೂ ಪ್ರಾರಂಭ ಕೂಡ ಆಗಿಲ್ಲ ಇಂತಹ ಕೆಲಸಗಳು ಇವತ್ತು ನಡೆಯುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ನಿಮ್ಮ ಪತೋಟಿ ಅವರ ಮೇಲೆ ಏನಾದರೂ ಇದೆಯೇ ಎಂದು ಕೇಳಿ ಬರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಅಣೆಕಟ್ಟೆಗಳ ಬಗ್ಗೆ ಹೇಳುವುದಾದರೆ, ಎಲ್ಲೆಲ್ಲಿ ಅಣೆಕಟ್ಟುಗಳನ್ನು ಕಟ್ಟಿದ್ದೀರಿ ಅದರ ಕೆಳಗಡೆ ಇರತಕ್ಕಂತಹ ಪ್ರದೇಶಗಳಿಗೆ ಮಾತ್ರ ಪ್ರಯೋಜನವಾಗುತ್ತದೆ, ಯಾರ್ಯಾರು ಅಲ್ಲಿ ಜಮೀನುಗಳನ್ನು ಇಟ್ಟು ಕೊಂಡಿದ್ದಾರೆ ಅಂತಹವರಿಗೆ ಪ್ರಯೋಜನವೇ ಹೊರತಾಗಿ ಯಾರ್ಯಾರು ಖಾಷ್ಕಿ ಜಮೀನುಗಳನ್ನು ಇಟ್ಟು ಕೊಂಡಿರುತ್ತಾರೆ ಅವರಿಗೆ ಏನೂ ಪ್ರಯೋಜನವಾಗಿಲ್ಲ. ಅದಕ್ಕೆ ಎಷ್ಟು ಹಣವನ್ನು ಖರ್ಚು ಮಾಡುತ್ತೀರೋ ಆಷ್ಟೇ ಹಣವನ್ನು ಇದಕ್ಕೂ ಕೂಡ ಖರ್ಚು ಮಾಡಬೇಕೆಂದು ಹಿಂದೆ ಹೇಳಿದ್ದೆ. ಅದನ್ನು ಈಗಲಾದರೂ ಮಾಡುತ್ತೀರಾ ? ನಾನು ತಮಗೆ ಹೇಳುವುದೇನೆಂದರೆ ಗಂಗಾ ಕಲ್ಯಾಣ ಯೋಜನೆ ಬಹಳ ಒಳ್ಳೆಯ ಇದು ಯಶಸ್ವಿಯಾಗಲಿ ಆದರೆ ಈ ಯೋಜನೆಯನ್ನು ಎಲ್ಲಿ ಯಾರಾ ಬಡವರಿದ್ದಾರೆ ಯಾರಾ, ನಿರ್ಗತಿಕರಿದ್ದಾರೆ ಯಾರಾ, ಅಲ್ಲಿ ಜಾಗಿಗೆ ತೆಗೆದುಕೊಂಡು ಬನ್ನಿ ಎರಡೂವರೆ ಕೋಟಿ ರೂಪಾಯಿಯನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ ಇದಕ್ಕೆ ಇನ್ನೂ ಹೆಚ್ಚು ಗಮನ ಕೊಟ್ಟು ಹೆಚ್ಚು ಕುಟುಂಬಗಳಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಹಾಗೂ ಇದಕ್ಕೆಲ್ಲಾ ಮುಂದಿನ ಕಾರ್ಯ ಕ್ರಮ ಏನು ಇಟ್ಟು ಕೊಂಡಿದ್ದೀರಿ ಅನ್ನುವುದರ ಬಗ್ಗೆಯೂ ಕೂಡ ವಿವರಣೆ ಕೇಳ ಬೇಕೆಂದು ಈ ಒಂದು ಮೋಷನ್ ಕಳಿಸಿದ್ದೆ ಇದಕ್ಕೆ ಮಾನ್ಯ ವೆಂಕಟರಾಮಯ್ಯನವರೂ ಕೂಡ ಸಹಿ ಮಾಡಿದ್ದಾರೆ ಆದ್ದರಿಂದ ಅವರಿಗೂ ಮಾತನಾಡಲು ಅವಕಾಶ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್ ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಈ ಗಂಗಾ ಕಲ್ಯಾಣ ಯೋಜನೆ ಏನಿದೆ ಇದು ಬಹಳ ಮುಖ್ಯವಾದುದು. ಪರಿಶಿಷ್ಟ ವರ್ಗದ ಜನರಿಗೆ ಜಮೀನಿದ್ದರೂ ಕೂಡ ಆ ಜಮೀನಿನಲ್ಲಿ ಉಳುವುದಕ್ಕಾಗುವುದಿಲ್ಲ, ಒಂದು ವೇಳೆ ಉತ್ತರೂ ಕೂಡಬಿಟ್ಟೆ ಕೈಗೆ ಸಿಗುವುದಿಲ್ಲ ಈ ರೀತಿಯಾಗಿ ಬಿಳಿ

ಯೆಲ್ಲಾ ನಾಶವಾಗಂತ್ತಿದೆ. ಎಲ್ಲಾ ಕಡೆಗೂ ನೀರಾವರಿ ನೀರಾವರಿ ಸೌಕರ್ಯವನ್ನು ಒದಗಿಸುವ ಕೆಲಸವನ್ನು ಮಾಡಬೇಕು ಆದರೆ ಅದನ್ನು ಮಾಡುತ್ತಿಲ್ಲ. ಇದಕ್ಕೆ ಮುಖ್ಯವಾಗಿ ಜಿಯಾಲಜಿಸ್ಟ್ ಹೋಗಬೇಕು ಅವರು ಅಲ್ಲಿ ಪಾಯಿಂಟ್ ನೋಟ್ ಮಾಡಬೇಕು ಎಂದು ಮಾನ್ಯ ದೇವೇಗೌಡರಿಗೆ ಹೇಳಿದ್ದೆ ಈಗ ಅವರು ರೆಕಾರ್ಡ್ ಬಿಲ್ ಆಫ್ ಮಾಡುತ್ತಾರೆ ಯೋಜನೆ ಮಾಡುತ್ತಾರೆ. ೬೦ ಅರ್ಜಿ ನಮ್ಮ ಕೋಲಾರದಲ್ಲಿ ಹಾಕಿದ್ದುದರಲ್ಲಿ ೨೧ಕ್ಕೆ ಕೊಟ್ಟಿದ್ದಾರೆ. ಬೇರೆ ತಾಲ್ಲೂಕಿನಲ್ಲಿ ಎಲ್ಲೂ ಕೊಟ್ಟಿಲ್ಲ. ಹತ್ತು ಎಕರೆ ಜಮೀನು ಇರತಕ್ಕಂತಹ ಜಾಗದಲ್ಲಿ ಬಾವಿ ತೆಗೆಸಲು ಹತ್ತು ಜನರನ್ನು ಸೇರಿಸಿ ಮೈನರ್ ಇರಿಗೇಷನ್ ಅಸಿಸ್ಟೆಂಟ್ ಇಂಜಿನಿಯರ್‌ಗೆ ಅರ್ಜಿ ಕೊಡಿಸಿದ್ದೆ ಅವರು ಮಾಡಿಸುತ್ತೇನೆಂದು ಹೇಳಿದರು ನಂತರ ಕೇಳಿದಾಗ ಜಿಯಾಲಜಿಸ್ಟ್ ಬರಲಿಲ್ಲವೆಂದು ಹೇಳುತ್ತಾರೆ. ಈಗ ಅಲ್ಲಿ ಏನು ಮಾಡುತ್ತಾರೆಂದರೆ, ಸಂಮಾರು ಎರಡು ತಿಂಗಳಿಗೆ ಒಂದು ದಿವಸ ಜಿಯಾಲಜಿಸ್ಟ್ ಅನ್ನು ಕರೆದುಕೊಂಡು ಬರುತ್ತಾರೆ ಆವನು ಏನು ಮಾಡುತ್ತಾನೆಂದರೆ ೨೦ ಅಡಿ ೧೫ ಅಡಿ ತೆಗೆದು ನೋಡಿ ನೀರು ಸಿಕ್ಕುವುದಿಲ್ಲವೆಂದು ಸರ್ಟಿಫೈ ಮಾಡುತ್ತಾನೆ. ಈ ಸ್ಕೀಮ್ ಏಕೆ ಫೇಲ್ ಆಯಿತು ಎಂಬುದರ ಬಗ್ಗೆ ಮಾನ್ಯ ದೇವೇಗೌಡರಿಗೆ ಒಂದು ಉದಾಹರಣೆ ನೀಡಿದೆ. ನಾನು ಹೇಳುವುದೇನೆಂದರೆ, ಒಬ್ಬ ಜಿಯಾಲಜಿಸ್ಟ್ ಇರಲಿ ಅವನು ಮೂರು ಕಡೆ ಸ್ಕೀಮ್ ಅನ್ನು ಹಾಕಿಕೊಂಡು ಆ ಮೂರೂ ಕಡೆಗಳಲ್ಲೂ ಸಕ್ಸಸ್ ಆದರೆ ಒಂದು ಕಡೆಯಲ್ಲಾದರೂ ಆದರೆ ಅದರಿಂದಲಾದರೂ ಸ್ವಲ್ಪ ಜಮೀನಿಗೆ ನೀರು ಸಿಗುತ್ತದೆ ಇದರಿಂದಾಗಿ ಬಡವರಿಗೆ ಅನುಕೂಲವಾಗುತ್ತದೆ. ಗಂಗಾ ಕಲ್ಯಾಣ ಯೋಜನೆ ಬಹಳ ಚೆನ್ನಾಗಿದೆ ಆವರ ಸಂಸಾರದಲ್ಲಿ ಗಂಗೆಯನ್ನು ತಂದೂ ಅವರ ಕಷ್ಟಗಳನ್ನು ಪರಿಹಾರ ಮಾಡಲು ಸಾಧ್ಯವಾಗುತ್ತದೆ. ಆದರೆ ಇದಕ್ಕೆ ಕೊಟ್ಟಿರುವ ಮೂರು ಕೋಟಿ ರೂಪಾಯಿಯನ್ನು ಖರ್ಚು ಮಾಡಿಲ್ಲವೆಂದರೆ ಬಹಳ ಅನ್ಯಾಯ ಮಾನ್ಯ ದೇವೇಗೌಡರ ಕಾಲದಲ್ಲಿ ಇದು ಆಗಬಾರದು.ಖಾಸಗೀ ಜಿಯಾಲಜಿಸ್ಟ್‌ಗಳನ್ನಾದರೂ ನೇಮಕ ಮಾಡಿ ಎಲ್ಲಾ ಕಡೆಗಳಲ್ಲೂ ಇದನ್ನು ಇಂಪ್ಲಿಮೆಂಟ್ ಮಾಡಿದರೆ ಬಡವರಿಗೆ ಅನುಕೂಲ ಮಾಡಿದ ಹಾಗೆ ಆಗುತ್ತದೆ. ನಾಮಕಾವಸ್ಥೆಗೆ ಬೇಕಾದಷ್ಟು ಸ್ಕೀಮ್‌ಗಳು ಇದೆ. ಇವರು ಅದನ್ನು ಉಪಯೋಗ ಮಾಡಿಕೊಳ್ಳಬೇಕು ಅದೂ ಜನರಿಗೆ ಮುಟ್ಟಬೇಕೇ ಇವರು ಇದನ್ನು ಮಾಡುತ್ತಿಲ್ಲ ಈಗ ಜಿಯಾಲಜಿಸ್ಟ್‌ಗಳು ಸಾಕಷ್ಟು ಇಲ್ಲದೇ ಇರುವುದರಿಂದ ಏನು ತೊಂದರೆಯಾಗಿದೆ ಅದನ್ನು ತಪ್ಪಿಸಿಬೇಕು ಮೈನರ್ ಇರಿಗೇಷನ್‌ನವರೇ ಅವರನ್ನು ಅಪಾಯಿಂಟ್ ಮಾಡಬೇಕೋ ಬೇಡವೋ ಎಂಬುದನ್ನು ಯೋಜನೆ ಮಾಡಿ. ಒಂದೊಂದು ತಾಲ್ಲೂಕಿಗೆ ಜಿಯಾಲಜಿಸ್ಟ್ ಅನ್ನು ಅಪಾಯಿಂಟ್ ಮಾಡಿ ಎಂದು ಈ ಮೂಲಕ ತಮ್ಮನ್ನು ವಿನಂತಿಸುತ್ತೇನೆ. ಖಾಸಗೀ ಜಿಯಾಲಜಿಸ್ಟ್‌ರವರಿಗೆ ೪೦೦ ರೂಪಾಯಿ ಎಂದು ಒಂದು ರೇಟ್ ಇಟ್ಟುಕೊಂಡಿದ್ದಾರೆ ಅವರನ್ನಾದರೂ ಕರೆತಂದು ಈ ಕೆಲಸವನ್ನು ಮಾಡಿಸಿ ಜನರಿಗೆ ನೀರನ್ನು ದೊರೆಕಿಸಿಕೊಡಿ ಇದಕ್ಕೆ ಸರಿಯಾದಂತಹ ಕಾರ್ಯಕ್ರಮವನ್ನು ರೂಪಿಸದೇ ಹೋದರೆ ಗಂಗಾ ಕಲ್ಯಾಣ ಯೋಜನೆ ಬರೀ ಪೇಪರ್‌ನಲ್ಲಿ ಇರುತ್ತದೆ ಇದರಿಂದ ಜನಗಳಿಗೆ ಉಪಯೋಗವಾಗುವುದಿಲ್ಲ. ಎಲ್ಲಾ ಹಳ್ಳಿಗಳಲ್ಲೂ ಕೂಡ ಅರ್ಜಿಗಳನ್ನು ಹಾಕುತ್ತಿದ್ದು, ಜಿಯಾಲಜಿಸ್ಟ್ ಬರಬೇಕೆಂದು ಹೇಳುತ್ತಿದ್ದಾರೆ. ನಮ್ಮ ಸ್ನೇಹಿತರು ಹೇಳಿದ ಹಾಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ವಿದ್ಯುಚ್ಛಕ್ತಿಯನ್ನು ಕೂಡ ಒದಗಿಸಬೇಕಾಗುತ್ತದೆ. ಜಿಯಾಲಜಿಸ್ಟ್‌ಗಳನ್ನು ನೇಮಕ ಮಾಡಿ ತೊಂದರೆಯನ್ನು ನಿವಾರಿಸಿ ಈ ಯೋಜನೆಯಿಂದ ಜನರಿಗೆ ಅನುಕೂಲವಾಗುವ ಹಾಗೆ ಮಾಡಿ, ಅರ್ಜಿಗಳನ್ನು ಯಾರು ಕೊಟ್ಟಿದ್ದಾರೆ ಅವರಿಗೆ ನೀರನ್ನು ಕೊಡುವ ಹಾಗೆ ಮಾಡಬೇಕೆಂದು ಕಳಕಳಿಯಿಂದ ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಮಾನ್ಯ ಅಧ್ಯಕ್ಷರೇ, ಅರ್ಧ ಗಂಟೆಯ ಚರ್ಚೆಯಲ್ಲಿ ಮಾನ್ಯ ಬಸವಲಿಂಗಪ್ಪನವರು ಎರಡು ಮೂರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಮುಖ್ಯವಾಗಿ ಅವರ ಕ್ಷೇತ್ರದಲ್ಲಿನ ಕೆಲಸಗಳಿಗೆ ವಿದ್ಯುಚ್ಛಕ್ತಿ ಸಿಕ್ಕಿಲ್ಲ ಇದರಿಂದಾಗಿ ಫಲಾನುಭವಿಗಳಿಗೆ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಇದು ಬಹಳ ಪ್ರಮುಖವಾದುದು ಹಾಗೂ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟಷ್ಟು ಮಾಡಿದ್ದೀರಿ ಎಂದು ಕೇಳಿದ್ದಾರೆ. ಅವರ ತಾಲ್ಲೂಕಿನಲ್ಲಿ ಆಗಿರುವ ತೊಂದರೆಯನ್ನು ಸರಕಾರ ಅತಿ ಶೀಘ್ರವಾಗಿ ನಿವಾರಣೆ ಮಾಡಬೇಕೆಂಬ ವಾದವನ್ನು ಮಂಡನೆ ಮಾಡಿದ್ದಾರೆ. ಈ ಯೋಜನೆ ಪ್ರಾರಂಭವಾದುದು. ೧೯೮೫-೮೫ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಇದನ್ನು ಘೋಷಣೆ ಮಾಡಿದರು ಆ ಯೋಜನೆ ಫಾರ್ಮುಲೇಟ್ ಮಾಡಬೇಕಾದರೆ ತಡವಾಗಿದೆ, ಕೆಲವು ನಿಯಮಾವಳಿಯನ್ನು ರೂಪಿಸತಕ್ಕಂತಹ ಕಾಲದಲ್ಲಿ ಸ್ವಲ್ಪ ಮಟ್ಟಿಗೆ ನಿಧಾನವಾಗಿದೆ

ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ೧೯೮೪–೮೫ರಲ್ಲಿ ಕ್ಯಾಟಗರಿ ೧ ರಲ್ಲಿ ಇಟ್ಟಂತಹ ಹಣ ೫೦ ಲಕ್ಷ ರೂಪಾಯಿಗಳು ಇದರಲ್ಲಿ ಯಾರ್ಯಾರು ಬರುತ್ತಾರೆಂದರೆ ಎಸ್. ಸಿ. ಎಸ್. ಟಿ. ಯವರು ಯಾರಿದ್ದಾರೆ ಅವರು ೭೫ ಪರ್ಸೆಂಟ್ ಬೆನಿಫಿಷರೀಸ್ ಹಾಗೂ ಉಳಿದ ೨೫ ಪರ್ಸೆಂಟ್ ಬೇರೆ ಸಮಾಜದವರಂ ಇರ ಬಹುದು ಇದನ್ನು ಕ್ಯಾಟಗರಿ ಒಂದು ಎಂದು ನಿರ್ಣಯ ಮಾಡಿದೆವು. ಕ್ಯಾಟಗರಿ ೨ ರಲ್ಲಿ ಹಿಂದುಳಿದ ಸಮಾಜದವರು ೫೦ ಪರ್ಸೆಂಟ್ ಇರಬೇಕು ೨೫ ಪರ್ಸೆಂಟ್ ಬೇರೆ ಯಾವುದೇ ಸಮಾಜದವರು ಇರ ಬಹುದು. ಮೊದಲನೇ ವರ್ಷ ಒಂದು ಕೋಟಿ ಹಣವನ್ನು ಇಟ್ಟಿದ್ದೆವು ಆ ವರ್ಷ ಖರ್ಚಾದದ್ದು ಬರೀ ೨೦ ಲಕ್ಷ ರೂಪಾಯಿ ಮಾತ್ರ ಫಾರ್ಮಾಲೇಟ್ ಮಾಡುವಾಗ ತಡವಾಯಿತು, ಡಿಸೆಂಬರ್ ಕೊನೆ ಹೊತ್ತಿಗೆ ರೂಪು ರೇಷೆ ಕೊಡಬೇಕಾಗಿ ಬಂತು ಆದರಿಂದಾಗಿ ಆ ವರ್ಷ ೨೦ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ೧೯೮೫–೮೬ರಲ್ಲಿ ಮತ್ತೆ ಒಂದು ಕೋಟಿ ರೂಪಾಯಿಯನ್ನು ನಿಗದಿ ಮಾಡಿದ್ದೇವೆ, ೩೦೨ ಕೆಲಸವನ್ನು ತೆಗೆದುಕೊಂಡಿದ್ದೇವೆ. ಇನ್ನು ಜಿಯಾಲಜಿಸ್ಟ್ ಬಗ್ಗೆ ಹೇಳಿದರಿ. ೭೪ ಕಡೆಗಳಲ್ಲಿ ಬೋರ್‌ವೆಲ್‌ಗಳು ಫೇಲ್ ಆಗಿವೆ ೧೦೮ ಬಾವಿಗಳನ್ನು ಪೂರ್ತಿ ಮಾಡಿದ್ದೇವೆ. ಕ್ಯಾಟಗರಿ ೧ರಲ್ಲಿ ೮೦ ಬಾವಿಯಿಂದ ೬೫೧ ಹೆಕ್ಟೇರಿಗೆ ನೀರನ್ನು ಕೊಡುತ್ತಿದ್ದೇವೆ. ಕ್ಯಾಟಗರಿ ಎರಡರಲ್ಲಿ ೨೮ ಬಾವಿಯನ್ನು ಮಂಗಿಸಿ ೩೭೪ ಹೆಕ್ಟೇರ್ ಭೂಮಿಗೆ ನೀರನ್ನು ಕೊಡುತ್ತಿದ್ದೇವೆ.

೧೯೮೫–೮೬ನೇ ಸಾಲಿನಲ್ಲಿ ಒಟ್ಟು ೧೦೨೫ ಹೆಕ್ಟಾರ್ಸ್‌ಗಳಿಗೆ ನೀರನ್ನು ಕೊಡುತ್ತಿದ್ದೇವೆ. ಅಲ್ಲಿಗೆ ಕಂಪ್ಲೀಟ್ ಆಗಿರುವ ವರ್ಕ್ಸ್ ೧೦೮ ಆಯಿತು ಇನ್ನು ಉಳಿದಿದ್ದು ಮುಂದಿನ ವರ್ಷ ಕ್ಯಾರಿ ಓವರ್ ಮಾಡುತ್ತೇವೆ ಇದಕ್ಕೆ ಒಟ್ಟು ಖರ್ಚಾಗಿರತಕ್ಕಂಥಾದ್ದು ೧ ಕೋಟಿ ೨೪ ಲಕ್ಷದ ೨೧ ಸಾವಿರ. ಹಾಗೆಯೇ ೧೯೮೫–೮೬ರಲ್ಲಿ ಈ ಹಣದಲ್ಲಿ ತೆಗೆದುಕೊಂಡಿರತಕ್ಕಂಥಾ ಕೆಲಸ ಸ್ಪಿಲ್ ಓವರ್ ಕೆಲಸ ೧೦೨ ಇದಂ ಕ್ಯಾಟಗರಿ ಒಂದು ಹಾಗೆಯೇ ಕ್ಯಾಟಗರಿ ಒಂದರಲ್ಲಿ ಸ್ಪಿಲ್ ಓವರ್ ವರ್ಕ್ಸ್ ೧೯೮೬–೮೭ರಲ್ಲಿ ತೆಗೆದುಕೊಂಡವ್ದು ೨೭೮ ಇದು ಫೈಪ್ ವರ್ಕ್ಸ್. ಇನ್ನು ಕ್ಯಾಟಗರಿ ಎರಡರಲ್ಲಿ ೧೯೮೬–೮೭ ರಲ್ಲಿ ೭೮ ಅನ್ನು ತೆಗೆದುಕೊಂಡಿದ್ದೇವೆ. ಈ ಬಗ್ಗೆ ಇರತಕ್ಕಂಥಾ ಪ್ರಶ್ನೆಗೆ ನಾನು ಆಗಲೇ ಉತ್ತರ ಹೇಳಿದ್ದೇನೆ. ಈ ವರ್ಷ ತೆಗೆದುಕೊಂಡಿರತಕ್ಕಂಥಾ ವರ್ಕ್ಸ್ ೨೫೩ ಟೋಟಲ್ ೪೧೬ ವರ್ಕ್ಸ್ ಆಗಂತ್ತದೆ ಸ್ಪಿಲ್ ಓವರ್ ಈ ವರ್ಷ ಕಂಪ್ಲೀಟ್ ಆಗಿರುವುದು ೧೨೩ ಅನ್ನು ಮುಂಗಿಸಿದ್ದೇವೆ. ಕ್ಯಾಟಗರಿ ಒಂದರಲ್ಲಿ ನೀರಾವರಿ ಆಗಿರುವ ಪ್ರದೇಶ ಒಟ್ಟು ೭೮೫ ಹೆಕ್ಟಾರ್ಸ್‌ಗಳು. ಕ್ಯಾಟಗರಿ ಎರಡರಲ್ಲಿ ಈ ವರ್ಷ ೨೮೬ ಹೆಕ್ಟಾರ್ಸ್ ಆಗಿವೆ. ಒಟ್ಟು ೧೦೭೧ ಹೆಕ್ಟಾರ್ಸ್‌ಗೆ ಈ ಯೋಜನೆಯಲ್ಲಿ ನೀರನ್ನು ಕೊಟ್ಟಿದ್ದೇವೆ, ಇನ್ನು ಈ ವರ್ಷ ಇದಕ್ಕಾಗಿ ಇಟ್ಟಿರುವ ಹಣ ೨೫೦ ಲಕ್ಷ ನಾವು ಡಿಸೆಂಬರ್‌ನವರೆಗೆ ಖರ್ಚು ಮಾಡಿರುವುದು ೧೭೨ ಲಕ್ಷ ೨೧ ಸಾವಿರ ಇನ್ನೂ ಹಲವಾರು ಯೋಜನೆಗಳು ವೇರಿಯಂಸ್ ಸ್ಟೇಜಸ್‌ನಲ್ಲಿದೆ ಅದನ್ನೆಲ್ಲಾ ಪೂರ್ತಿ ಮಾಡಬೇಕಾದರೆ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ. ನಿಮಗೆ ಈ ಬಗ್ಗೆ ಬೇಕಾದರೆ ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡಬಲ್ಲೆ. ತಾಲ್ಲೂಕಾ ವೈಸ್ ಬೇಕು ಎಂದರೆ ಅದನ್ನು ತರಿಸಿ ಕೊಡುತ್ತೇನೆ. ಹೋದವರ್ಷ ೩೧೨ ವರ್ಕ್ಸ್ ಆಗಿದೆ, ಅದರ ಅಂಕಿ ಅಂಶಗಳು ಹೀಗೆ ಇವೆ, ಜಿಲ್ಲಾವಾರು ಗಂಗಾ ಕಲ್ಯಾಣ ಯೋಜನೆಯ ಪ್ರಗತಿಯ ಒಂದು ಪಕ್ಷಿ ನೋಟ ೧೯೮೫–೮೬ ರದ್ದು ಈ ರೀತಿ ಇದೆ. ಬೆಂಗಳೂರು ೨೫, ತುಮಕೂರು ೧೭, ಕೋಲಾರ ೨೩, ಶಿವಮೊಗ್ಗ ೧೬, ಚಿತ್ರದುರ್ಗ ೧೩, ಮೈಸೂರು ೨೫ ಮಂಡ್ಯ–೨೯, ಕೊಡಗು ೩, ದಕ್ಷಿಣ ಕನ್ನಡ ೧೮, ಹಾಸನ–೧೩, ಚಿಕ್ಕ ಮಗಳೂರು ೧೨, ಬೆಳಗಾಂ–೯, ಬಿಜಾಪುರ–೨೦, ಧಾರವಾಡ–೧೫, ಉತ್ತರ ಕನ್ನಡ ೬, ಗುಲ್ಬರ್ಗ ೨೪, ಬೀದರ್ ೧೬, ಬಳ್ಳಾರಿ ೧೧ ರಾಯಚೂರು ೧೯ ಒಟ್ಟು ೩೧೨. ಈ ವರ್ಷದ್ದೂ ಬೇಕಾದರೆ ಪಟ್ಟಿಯಂನ್ನು ತರಿಸಿಕೊಡುತ್ತೇನೆ. ೧೯೮೬–೮೭ರಲ್ಲಿ ಕ್ಯಾಟಗರಿ ಎರಡರಲ್ಲಿ ೧೯೮೬ ಡಿಸೆಂಬರ್‌ವರೆಗೆ ಕೈ ಕೊಂಡ ಕೆಲಸಗಳು ಈ ರೀತಿ ಇವೆ. ಬೆಂಗಳೂರು ೨೨, ತುಮಕೂರು ೫೫. ಕೋಲಾರ ೨೨ ಶಿವಮೊಗ್ಗ ೨೨, ಚಿತ್ರದುರ್ಗ ೬ ಮೈಸೂರು ೨೨ ಮಂಡ್ಯ ೬ ಕೊಡಗು ೩, ದಕ್ಷಿಣ ಕನ್ನಡ ೩, ಹಾಸನ ೫೫. ಚಿಕ್ಕ ಮಗಳೂರು–೩ ಬೆಳಗಾಂ ೨೨ ಬಿಜಾಪುರ ೬, ಧಾರವಾಡ ೨೨ ಉತ್ತರ ಕನ್ನಡ ೨ ಗುಲ್ಬರ್ಗ ೬, ಬೀದರ್ ೨೨, ಬಳ್ಳಾರಿ ೩, ರಾಯಚೂರು ೬, ಒಟ್ಟು ೭೮ ಆಯಿತು ಈಗ ನಿಮಗೆ ಎರಡೂ ಕ್ಯಾಟಗರಿ ಬಗ್ಗೆ ಹೇಳಿದ್ದೇನೆ ಇನ್ನು ಕ್ಯಾಟಗರಿ ಎರಡರಲ್ಲಿ ೧೯೮೬–೮೭ನೇ ಸಾಲಿನಲ್ಲಿ ಕೈ ಗೊಂಡಿರುವ ಕೆಲಸಗಳು ಒಟ್ಟು ೨೦೮ ಇದೆ ಅದರ ಅಂಕಿ ಅಂಶಗಳನ್ನು ಸಹ ತಮ್ಮ ಮುಂದೆ ಇಡುತ್ತೇನೆ ಅದು, ಈ ರೀತಿ ಇದೆ. ಬೆಂಗಳೂರು ೨೨, ತುಮಾಕೂರು ೧೨, ಕೋಲಾರ ೫೫, ಶಿವಮೊಗ್ಗ ೨೨, ಚಿತ್ರದುರ್ಗ ೩, ವೈಸೂರ ೪, ಮಂಡ್ಯ ೧೭, ಕೊಡಗು ೪, ದಕ್ಷಿಣ ಕನ್ನಡ ೧೪, ಹಾಸನ ೩, ಚಿಕ್ಕ ಮಂಗಳೂರು ೪ ಬೆಳಗಾಂ ೭,

ಬಿಜಾಪುರ ೧೮, ಧಾರವಾಡ ೨೯, ಉತ್ತರ ಕನ್ನಡ ೧೪, ಗುಲ್ಬರ್ಗ ೧೯ ಬೀದರ್ ೭, ಬಳ್ಳಾರಿ ೭ ರಾಯಚೂರು ೧೦, ಇದು ಒಟ್ಟು ೨೮೮, ಇದು ಕ್ಯಾಟಗರಿ ಒಂದರಲ್ಲಿ ೧೯೮೬-೮೭ರಲ್ಲಿ ಕೈಗೊಂಡ ಬಾವಿಗಳ ಸಂಖ್ಯೆ.

ಈ ಬಗ್ಗೆ ನಾನು ಈ ಸಂದರ್ಭದಲ್ಲಿ ಇಷ್ಟೇ ಹೇಳುತ್ತೇನೆ. ಏನೆಂದರೆ, ಈ ಬಗ್ಗೆ ಅಂದರೆ ಈ ಜನರು ವಾಸ ಮಾಡುವ ಸ್ಥಳಗಳ ಬಗ್ಗೆ ಮತ್ತೆ ಐಡೆಂಟಿಫಿಕೇಷನ್ ಮಾಡಿ ಎಂದು ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ ಈಗ ಇದಕ್ಕೆ ಸಂಬಂಧಪಟ್ಟಂತೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಕಾಂಪ್ರಹೆನ್ಸಿವ್ ಆಗಿ ಒಂದು ಬುಕ್‌ಲೆಟ್ ಮಾಡಿದ್ದೇವೆ. ಇದರ ಪ್ರಕಾರ ಸುಮಾರು ೯೬೫ ಸ್ಕೀಮಂಗಳು ಮೊದಲನೆಯ ಕ್ಯಾಟಗರಿಯಲ್ಲಿ ಬರುತ್ತವೆ. ಈ ಸ್ಕೀಮಂಗಳೆಲ್ಲಾ ಕಾರ್ಯಗತವಾದಾಗ ೭೯೩೩ ಹೆಕ್ಟಾರ್ ಜಮೀನಿಗೆ ನೀರನ್ನು ಕೊಡಬಹುದು. ಆದೇರೀತಿ ಎರಡನೇ ಕ್ಯಾಟಗರಿಯಲ್ಲಿ ೪೩೬ ಸ್ಕೀಮಂಗಳು ಬರುತ್ತವೆ. ಈ ಸ್ಕೀಮುಗಳ ಮೂಲಕ ಸುಮಾರು ೫೬೫೯ ಹೆಕ್ಟಾರ್ ಜಮೀನಿಗೆ ನೀರನ್ನು ನಾವು ಕೊಡಬಹುದು. ಇವುಗಳ ಟೋಟಲ್ ಕಾಸ್ಟ್ ೧೫ ಕೋಟಿ ರೂಪಾಯಿಗಳಿಗೂ ಹೆಚ್ಚಾಗುತ್ತದೆ. ಇದು ನಮ್ಮ ಅಧಿಕಾರಿಗಳು ಕೊಟ್ಟಿರುವಂತಹ ವರದಿ. ಇದು ಆದಮೇಲೆ ನಾವು ಇತ್ತೀಚೆಗೆ ಒಂದು ಯೋಚನೆ ಮಾಡಿದ್ದೇವೆ. ಆದರೆ ಇನ್ನೂ ಸರ್ಕಾರದ ಆಜ್ಞೆಯನ್ನು ಹೊರಡಿಸಿಲ್ಲ. ಏನೆಂದರೆ, ಈ ಒಂದು ಯೋಜನೆಯನ್ನು ನಮ್ಮ ರಾಜ್ಯದಲ್ಲಿರುವಂತಹ ಸಣ್ಣ ಹಿಡುವಳಿದಾರರಿಗೆ ಮತ್ತು ಅತಿ ಸಣ್ಣ ಹಿಡುವಳಿದಾರರಿಗೂ ವಿಸ್ತರಣೆ ಮಾಡಬೇಕು ಮತ್ತು ಈ ಯೋಜನೆಯ ವ್ಯಾಪ್ತಿಯನ್ನು ಇನ್ನೂ ಹೆಚ್ಚು ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಮತ್ತೆ ಈ ಯೋಜನೆ ಕೈಕೊಳ್ಳಲು ಒಂದು ಸ್ಕೀಮಿನಲ್ಲಿ ೧೫ ಎಕರೆಗಳಷ್ಟು ಜಮೀನು ಇರಬೇಕೆಂದು ಏನೂ ನಿಯಮವಿದೆ. ಆದನ್ನು ಸಹ ಸಡಿಲ ಮಾಡಿ ೨೦ ಎಕರೆ ೨೫ ಎಕರೆ, ೩೦ ಎಕರೆ ಜಮೀನು ಇದ್ದರೂ ಸಹ ಈ ಯೋಜನೆಯನ್ನು ಕೈಕೊಳ್ಳಬೇಕೆಂದಿದ್ದೇವೆ. ಈಗ ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವವರಿಗೆ ೭ ಸಾವಿರ ರೂಪಾಯಿಗಳ ಸೀಲಿಂಗ್ ಲಿಮಿಟ್‌ನ್ನು ಹಾಕಿದ್ದೇವೆ. ಈ ಬಗ್ಗೆ ಒಂದೇ ಮಾತಿನಲ್ಲಿ ಹೇಳುವುದಾದರೆ, ಇದೊಂದು ಅತ್ಯಂತ ಉಪಯುಕ್ತವಾದ ಯೋಜನೆ. ಇದು ನಮ್ಮ ರಾಜ್ಯದಲ್ಲಿ ಮೊದಲು ಪ್ರಾರಂಭವಾಗಿದೆ. ಈಗ ನಮ್ಮ ದೇಶದ ಬೇರೆ ರಾಜ್ಯಗಳಲ್ಲಿ ಈ ಯೋಜನೆ ಇಲ್ಲ. ಈ ಮಾತನ್ನು ನಾನು ಪ್ರಶಂಸೆಗಾಗಿ ಹೇಳುತ್ತಿಲ್ಲ. ನಾನು ಇತ್ತೀಚೆಗೆ ನಡೆದ ಎಲ್ಲ ರಾಜ್ಯಗಳ ನೀರಾವರಿ ಇಲಾಖೆ ಮಂತ್ರಿಗಳ ಕಾನ್‌ಫರೆನ್ಸ್‌ನಲ್ಲಿ ಚರ್ಚೆ ಮಾಡಿದ್ದೇನೆ. ಇಡೀ ಹಿಂದೂಸ್ಥಾನದಲ್ಲಿ ಮೊದಲ ಬಾರಿಗೆ ಈ ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತಂದಿದ್ದೇವೆ. ಈಗ ಈ ಯೋಜನೆಗೆ ೩ ಕೋಟಿ ರೂಪಾಯಿಗಳನ್ನು ಏನು ನಿರ್ಚು ಮಾಡುತ್ತಿದ್ದೇವೆ, ಇದರ ಜೊತೆಗೆ ಬೇರೆ ಬೇರೆ ಬಾಬುಗಳಿಗೆ ಈಗ ಖರ್ಚು ಮಾಡುತ್ತಿರುವ ಹಣವನ್ನು ಕಡಿಮೆ ಮಾಡಿ ಇದಕ್ಕೆ ಇನ್ನೂ ಹೆಚ್ಚು ಹಣವನ್ನು ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಈ ಬಗ್ಗೆ ನಾನು ನೀರಾವರಿ ಇಲಾಖೆಯ ಬೇಡಿಕೆಗಳು ಇಲ್ಲಿ ಚರ್ಚೆಗೆ ಬಂದಾಗ ಉತ್ತರ ಕೊಡುತ್ತೇನೆ. ಕೆಲವು ಸಂದರ್ಭಗಳಲ್ಲಿ ಕಾನೂನನ್ನು ದೂರವಿಟ್ಟು ಈ ಜನರ ಏಳಿಗೆ ಕಡೆಗೆ ನೋಡಿ ಎಂದು ನನ್ನ ಅಧಿಕಾರಿಗಳಿಗೆ ಹೇಳಿದ್ದೇನೆ. ಭೂಗರ್ಭದಲ್ಲಿ ನೀರು ಸಿಗದಿರುವ ಕಡೆ ತೊರೆಯಲ್ಲಿ ಹರಿಯುವ ನೀರನ್ನೇ ಉಪಯೋಗಿಸಿ ಕೊಂಡು ಈ ಯೋಜನೆ ಕೈಕೊಳ್ಳಿ ಎಂದು ಹೇಳಿದ್ದೇನೆ. ಈ ಸಮಾಜದವರು ವಾಸ ಮಾಡುತ್ತಿರುವ ಕಡೆಗಳಲ್ಲಿ ಮೊದಲು ಕೆಲಸ ಪ್ರಾರಂಭ ಮಾಡಿ, ನಂತರ ಮಂಜೂರಾತಿ ಪಡೆದುಕೊಳ್ಳಿ ಎಂದು ಹೇಳಿದ್ದೇನೆ. ಈ ಯೋಜನೆ ಕೇವಲ ಪುಸ್ತಕದಲ್ಲಿ ಮಾತ್ರ ಇರಬೇಕು ಎಂಬುದು ನನ್ನ ಅಭಿಪ್ರಾಯವಲ್ಲ. ಇದು ಎಲ್ಲ ಕಡೆಯೂ ಕಾರ್ಯಗತವಾಗಬೇಕು. ಮೊನ್ನೆ ಮಾನ್ಯ ಕಾನಡೆಯವರು ಉತ್ತರ ಕನ್ನಡ ಜಿಲ್ಲೆಯಲ್ಲಿ ೧೬ ಕಡೆ ಬಾವಿ ತೋಡಿದರೂ ಸಹ ನೀರು ಬರಲಿಲ್ಲವೆಂದು ಹೇಳಿದರು. ಇಂತಹ ಕಡೆಗಳಲ್ಲಿ ಭೂಮಿಯ ಮೇಲೆ ಹರಿಯುವಂತಹ ನೀರನ್ನು ಅಂದರೆ ಪೆರಿನಿಯಲ್ ಸೋರ್ಸ್‌ನ್ನು ಉಪಯೋಗಿಸಿ ಕೊಂಡು ಈ ಯೋಜನೆ ಕೈಗೊಳ್ಳಿ ಎಂದು ಹೇಳಿದ್ದೇನೆ. ಮುಖ್ಯವಾಗಿ ಈ ಯೋಜನೆಯನ್ನು ಕೈಕೊಳ್ಳುವ ಕಡೆಗಳಲ್ಲಿ ಈ ಪರಿಶಿಷ್ಟ ವರ್ಗದ ಜನರು, ಈ ಸಮಾಜದ ಜನರು ಒಂದೇ ಕಡೆ ವಾಸವಾಗಿರ ಬೇಕು. ಈ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳ ಬಗ್ಗೆ ಒಂದು ಮಾತನ್ನು ಹೇಳಿದರೆ ತಾವು ಯಾರೂ ಬೇಸರ ಮಾಡಿಕೊಳ್ಳಬಾರದು. ಏನೆಂದರೆ, ಬಹುತೇಕ ಕಡೆಗಳಲ್ಲಿ ಈ ವರ್ಗದ ಜನರು ಒಂದೇ ಕಡೆ ವಾಸ ಮಾಡುತ್ತಿರುವುದೂ ಇವರ ಕಣ್ಣಿಗೆ ಬಿದ್ದರೂ ಸಹ ಇವರು ಆ ಜನರ ಜನರಕಡೆ ಗಮನ ಹರಿಸುವುದಿಲ್ಲ. ಮುಖ್ಯವಾಗಿ ಈ ಜನರ ಯೋಗಕ್ಷೇಮ ನೋಡಲು ಮನಸ್ಸು ಬೇಕು. ಮೊನ್ನೆ ನಾನು ಮಾನ್ಯ ಧರ್ಮಸಿಂಗ್ ಅವರ ಕ್ಷೇತ್ರದಿಂದ ಬರುವಾಗ ಒಂದು ಕಡೆ ೨೦-೩೦ ಗುಡಿಸಲುಗಳು ಇದ್ದವು. ಅದು ಭೀಮಾ ನದಿ ಹರಿಯುವಂಥ ಜಾಗ. ನಾನು ಆ ಜನರ ಬಗ್ಗೆ ವಿಚಾರಿಸಿದಾಗ ಅವರು

ಕಪ್ಪಳಿಗರು ಎಂದು ತಿಳಿಯಿತು. ಕೂಡಲೇ ಆ ಜನರ ಅನುಕೂಲಕ್ಕಾಗಿ ಈ ಒಂದು ಯೋಜನೆಯನ್ನು ಏತಕ್ಕೆ ಕೈಕೊಳ್ಳಬಾರದೆಂದು ನನ್ನ ಅಧಿಕಾರಿಗಳಿಗೆ ಕೇಳಿದೆ. ಈ ಯೋಜನೆಯನ್ನು ಕೈಕೊಳ್ಳುವ ಬಗ್ಗೆ ನಾನು ನನ್ನ ಅಧಿಕಾರಿಗಳಿಗೆ ಅಷ್ಟೇ ಅಲ್ಲ ಎಲ್ಲ ಡಿ. ಸಿ. ಗಳಿಗೂ, ಎಲ್ಲ ಎಂ.ಎಲ್.ಎ.ಗಳಿಗೂ ಎಲ್ಲ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್‌ಗಳಿಗೂ ಪತ್ರ ಬರೆದು ಹೇಳಿದ್ದೇನೆ. ಈ ಯೋಜನೆಗಳನ್ನು ಎಲ್ಲೆಲ್ಲಿ ತೆಗೆದುಕೊಳ್ಳಲು ಸಾಧ್ಯವಿದೆ ಎಂಬುದನ್ನು ಗುರುತು ಮಾಡಿ ನಮಗೆ ತಿಳಿಸಿದರೆ ನಾವು ಹಣ ಒದಗಿಸುತ್ತೇವೆಂದು ಹೇಳಿದ್ದೇನೆ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ಮಾನ್ಯ ಮಂಖ್ಯಮಂತ್ರಿಗಳು ಬೇಸರಪಟ್ಟುಕೊಳ್ಳಬಾರದು, ಏನೆಂದರೆ, ಈ ಯೋಜನೆಯ ಜಾರಿಯನ್ನು ನನ್ನ ಕೈಯಲ್ಲಿಯೇ ಇಟ್ಟುಕೊಳ್ಳಬೇಕೆಂದು ನಾನು ಇಷ್ಟಪಟ್ಟಿಲ್ಲ. ಅಧಿಕಾರ ವಿಕೇಂದ್ರೀಕರಣ ಮಾಡಿ ಡಿಸ್ಟ್ರಿಕ್ ಸೆಕ್ಟಾರ್‌ನಲ್ಲಿ ಇದನ್ನು ಅಳವಡಿಸಬೇಕೆಂಬುದು ಸಹ ನಮ್ಮ ಯೋಜನೆಯಲ್ಲಿದೆ. ಮಂಖ್ಯವಾಗಿ ಈ ಯೋಜನೆ ಮೂಲಕ ಈ ವರ್ಗದ ಜನರಿಗೆ ಹೆಚ್ಚು ಅನುಕೂಲ ಮಾಡಿ ಕೊಡಬೇಕೆಂಬುದೇ ನನ್ನ ಆಸೆ ಆಕಾಂಕ್ಷೆ ಆಗಿದೆ. ಈ ಬಗ್ಗೆ ನನ್ನ ದೃಷ್ಟಿಕೋನ ಏನಿದೆ ಎಂಬುದನ್ನು ಹೇಳಿದೆ. ಈ ಯೋಜನೆಗೆ ಈಗ ಒದಗಿಸಿರುವಂತಹ ಹಣದ ಮೊತ್ತ ತಮಗೆ ಕಡಿಮೆಯಾಗಿ ಕಾಣಬಹುದು, ಆದರೆ ಈ ಯೋಜನೆಯಿಂದ ಕಡುಬಡವರಿಗೆ ಅತಿ ಹೆಚ್ಚಿನ ಉಪಯೋಗ ಆಗುತ್ತದೆ. ಕೆಲವು ಕಡೆ ಹಾಗೆ ನೋಡಿದರೆ ೧೦೦ ಪರ್ಸೆಂಟ್ ಪೆಡ್ಯೂಲ್ಡ್ ಕ್ಯಾಸ್ಟ್‌ಸ್ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದಕ್ಕೆ ಒಂದು ಕೆಲಸ ಮಾಡಬಹುದು. ಅಂಡರ್‌ಗ್ರೌಂಡ್ ವಾಟರ್ ಬಗ್ಗೆ ಸರ್ವೆಮಾಡಿ. ಎಲ್ಲೆಲ್ಲಿ ಪೆಡ್ಯೂಲ್ಡ್ ಕ್ಯಾಸ್ಟ್‌ಸ್ ಲ್ಯಾಂಡ್ಸ್ ಇದೆ ಎಂದು ಐಡೆಂಟಿಫೈ ಮಾಡಿ, ಅಂಡರ್‌ಗ್ರೌಂಡ್ ವಾಟರ್ ಬಗ್ಗೆ ಸರ್ವೇಯರುಗಳನ್ನು ಕಳಿಸಿ, ವೆಲ್ ಸಿಂಕಿಂಗ್ ಡಿಪಾರ್ಟ್‌ಮೆಂಟ್ ಎಕ್ಸ್‌ಕ್ಲೂಸೀವ್ಲಿ ಮಾಡಿ. ಅವರ ಕೆಲಸ ಇದೆ. ಐಡೆಂಟಿಫೈಮಾಡಿ ಬೇಕಾದರೆ ೭೫ ಪರ್ಸೆಂಟ್ ಸಬ್ಸಿಡಿ ಕೊಟ್ಟು ೭೫ ಪರ್ಸೆಂಟ್ ಅವರಿಂದ ರಿಕವರಿಮಾಡಿ. ನಾನು ಏಕೆ ಹೇಳುತ್ತಿದ್ದೇನೆಂದರೆ ಅದಕ್ಕೆ ೩ ಕೋಟಿ ರೂಪಾಯಿ ಯೋಜನೆ ಮಾಡಿದಿರಿ. ಒಂದು ಕೋಟಿ ೪೮ ಲಕ್ಷ ಇಲ್ಲಿಯವರೆಗೆ ಖರ್ಚಾಗಿದೆ.

ಶ್ರೀ ಹೆಚ್.ಡಿ. ದೇವೇಗೌಡ.—ಎಬೌಟ್ ೩ ಕ್ರೋರ್ಸ್.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರ ಲ್ಯಾಂಡನ್ನು ಐಡೆಂಟಿಫೈ ಮಾಡಿ ಜಿಯಾಲಜಿಸ್ಟ್ ಯಿಂದ ಸರ್ವೆಮಾಡಿಸಿ ಎಲ್ಲೆಲ್ಲಿ ನೀರು ಬರುತ್ತದೆ ಅಲ್ಲಿ ಹೊಡೆದುಕೊಡಿ, ಹೊಡೆದು ಕೊಟ್ಟು ನೇರವಾಗಿ ಕನೆಕ್ಷನ್ ಕೊಟ್ಟರೆ ದೊಡ್ಡ ಉಪಕಾರ ಮಾಡಿದಹಾಗೆ ಆಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಒಪ್ಪಿಕೊಳ್ಳುತ್ತೇನೆ. ಈ ಸದನದ ಎಲ್ಲಾ ಸದಸ್ಯರಿಗೆ ಪತ್ರ ಬರೆದಿದ್ದೇನೆ. ಬಹುಶಃ ತಮಗೆ ಜ್ಞಾಪಕ ಇರಬಹುದು. ಪ್ರತಿಯೊಬ್ಬ ಸದಸ್ಯರಿಗೆ, ಜಿಲ್ಲಾಧಿಕಾರಿ, ಡಿಸ್ಟ್ರಿಕ್ ಸೋಷಿಯಲ್ ವೆಲ್‌ಫೇರ್ ಆಫೀಸರ್‌ಗೆ I wanted to see that this scheme should be extended to those sections of the people.

ಇದು ನನ್ನ ಆಸೆ. ತಾವು ಜಿಯಾಲಜಿಸ್ಟ್ ಎಂದು ಹೇಳಿದಿರಲ್ಲ ಒಂದೊಂದು ಸಾರಿ ಅವರು ಎಕ್ಸ್‌ಪರ್ಟ್ ಎಂದು ಅವರನ್ನು ಕರೆಯುವುದು. ಆದರೆ ಅವರು ತೋರಿಸಿದ ಕಡೆ ಫೇಲಾಗಿದೆ. ಹಳ್ಳಿಯವರು ಅನುಭವದಲ್ಲಿ ತೋರಿಸಿದ ಜಾಗದಲ್ಲಿ ನೀರು ಬಂದಿದೆ ನಾನು ಲೈಟರ್ ವೈನ್‌ನಲ್ಲಿ ಹೇಳುತ್ತಾ ಇಲ್ಲ. ಜಿಯಾಲಜಿಸ್ಟರದು ಕೆಲವು ಕಡೆ ಫೇಲಾಗಿದೆ. ಒಂದು ಸಾರಿ ಜಿಯಾಲಜಿಸ್ಟ್‌ನ ಬೆಂಗಳೂರಂ ಜಿಲ್ಲೆಯಲ್ಲಿ ನೀರೇ ಸಿಕ್ಕುವುದಿಲ್ಲ ಎಂದು ಹೇಳಿದರು. ಯಾರೋ ಒಬ್ಬ ರೈತ ನಮ್ಮ ಪಾರ್ಟಿ ಕಾರ್ಯ ಕರ್ತ ನಾನು ತೋರಿಸಿಕೊಡುತ್ತೇನೆ, ಅಲ್ಲಿ ನೀರು ಬರದೇಹೋದರೆ ಆ ದಂಡ ನಾನೇ ಕೊಡುತ್ತೇನೆ ಎಂದು ಹೇಳಿದ. ನಮ್ಮ ಆಫೀಸರಿಗೆ ಜೀಪಿನಲ್ಲಿ ಹೋಗಿ ಒಂದು ತಾಲ್ಲೂಕಿನ ಎಲ್ಲಾ ಹಳ್ಳಿಗಳನ್ನು ಸರ್ವೆ ಮಾಡಿ ಎಂದು ಹೇಳಿದೆ ಕನಕಪುರ ಕಾನ್‌ಸ್ಟಿಟ್ಯುಯನ್ಸಿ ಎಂದು ಇಟ್ಟುಕೊಳ್ಳಿ. ಆತನನ್ನು ಕರೆದುಕೊಂಡು ಹೋಗಿ, ಫೇಲಾಗಲಿ ಪರ್ವಾಗಿಲ್ಲ ಎಂದು ಹೇಳಿದೆ. ಅವನು ಎಲ್ಲೆಲ್ಲಿ ತೋರಿಸಿದ ಆಪ್ಟೂ ಕಡೆ ನೀರು ಬಂದಿದೆ. ಹಳ್ಳಿಗಾಡಿನಲ್ಲಿ ಈ ರೀತಿ ಜನ ಇದ್ದಾರೆ. ಬರೀ ಜಿಯಾಲಜಿಸ್ಟನ್ನು ಉಪಯೋಗ ಮಾಡಿಕೊಳ್ಳಬೇಕು ಎಂದು ಇಲ್ಲ. ನಾನು ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಅವರು ಸರ್ಟಿಫಿಕೇಟ್ ಕೊಡದೇ ಹೋದರೆ ಬೋರ್ ಹಾಕಲು ವುದಿಲ್ಲ, ಪೇಮೆಂಟ್ ಮಾಡುವುದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಈ ಸ್ಕೀಮಿನಲ್ಲಿ ಪೇಮೆಂಟ್ ಮಾಡತಕ್ಕ ಪ್ರಶ್ನೆ ಇಲ್ಲ. ನೀವು ಹೇಳತಕ್ಕಂಥಾದ್ದು ಸ್ಪೆಷನ್ ಕಾಂಪೊನೆಂಟ್ ಪ್ಲಾನ್‌ನಲ್ಲಿದೆ, ಇದರಲ್ಲಿ ಇಲ್ಲ, ನೀರಾವರಿ ಇಲಾಖೆಯಲ್ಲಿ ಸಡಿಲ ಮಾಡಿದ್ದೇವೆ. ತಮ್ಮಲ್ಲಿ ಎರಡು ಮಾಡಿದ್ದೀರಿ ಎಂದು ಹೇಳಿದ್ದೀರಿ. ಸ್ಥಳೀಯವಾಗಿ ಅನುಭವವಿರುವವರನ್ನು ಹೇಳಿ, ಳ ಕೇಸ್ ಫೇಲಾದರೂ ಪರ್ವಾಗಿಲ್ಲ ಮಾಡಿಸುತ್ತೇನೆ. ಇದರ ಇನ್ನೊಂದು ವಿಷಯವನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೂ ಇದ್ದಾರೆ. ನಮ್ಮ ನೀರಾವರಿ ಇಲಾಖೆಯಲ್ಲಿ ಮೇಜರ್, ಮೀಡಿಯಂನಿಂದ ೨–೩ ಕೋಟಿ ಡೈವರ್ಟ್ ಮಾಡುತ್ತೇವೆ. ಇದು ಒಂದು ವಿಷಯಕ್ಕೆ ಹಣದ ಕೊರತೆ ಹಚ್ಚಿಕೊಳ್ಳುವುದಿಲ್ಲ. ಉಪಯೋಗ ಆಗುವುದು ಬಡವರಿಗೆ. ಮಾನ್ಯ ಅಮರನಾಥ ಶೆಟ್ಟರ ಒಂದು ಜಿಲ್ಲೆಯೊಳಗೆ ೨೪ ಸಂಸಾರಗಳೂ ಪೆಡ್ಯೂಲ್ಡ್ ಕ್ಯಾಸ್ಟ್‌ನ ಇದೆ, ಮಂಕ್ಕಾಲು ಆರ್ಧ ಎಕರೆ, ೩೦ ಗುಂಟೆ, ೨೦ ಗುಂಟೆ ಜಮೀನು ಇರುವವರಿದ್ದಾರೆ. ಆದುದರಿಂದ ಈ ಸ್ಕೀಂ ವಿಷಯದಲ್ಲಿ ಮಾತ್ರ ಸರ್ಕಾರ ಉದಾರವಾದ ನೀತಿಯನ್ನು ತೆಗೆದುಕೊಳ್ಳುತ್ತದೆ. ದಯವಾಡಿ ನಿಮ್ಮ ಸಹಕಾರ ಕೇಳುತ್ತೇನೆ. ನಿಮ್ಮ ಸಹಕಾರ ಕೇಳಿ ನಾವು ಸುಮ್ಮನೆ ಕಂಳಿತುಕೊಳ್ಳುವುದಿಲ್ಲ. ಐಡೆಂಟಿಫೈಗೋಸ್ಕರ ಸಹಕಾರವನ್ನು ನೀವು ಎಕ್ಸ್‌ಟೆಂಡ್ ಮಾಡಿದರೆ ಅನುಕೂಲವಾಗುತ್ತದೆ. The benefit of this scheme can be extended to these communities. ಇಷ್ಟು ಈ ಸಂದರ್ಭದಲ್ಲಿ ಹೇಳಿದ್ದೇನೆ. ಹಣ ಒಂದೂವರೆ, ಎರಡು ಕೋಟಿ ಇಟ್ಟು ಕೊಂಡಿದ್ದಾರೆ ಎಂದು ಅಲ್ಲ. ಈ ಸ್ಕೀಮನ್ನು ಸ್ಪೀಡಪ್ ಮಾಡುವುದಕ್ಕೋಸ್ಕರ ಮತ್ತು ಈ ಸ್ಕೀಮಂ ಈ ವರ್ಗದ ಜನರ ಅನುಕೂಲಕ್ಕೆ ಮಾಡುವುದಕ್ಕೋಸ್ಕರ ಸಡಿಲ ಮಾಡುವುದು ಸರ್ಕಾರದ ವಂದೆ ಇದೆ.

ಅಧ್ಯಕ್ಷರು.—ಸಭೆಯನ್ನು ನಾಳೆ ಬೆಳಿಗ್ಗೆ ೧೦–೦೦ ಗಂಟೆಗೆ ಮುಂದೂಡಲಾಗಿದೆ.

(ಸದನವು ೭ ಘಂಟೆಗೆ ಮಂಕ್ತಯಂಪಾಗಿ, ಪುನಃ ದಿನಾಂಕ ೬ನೇ ಮಾರ್ಚಿ ಮಾಹೆ ೧೯೮೭ ಶುಕ್ರವಾರದಂದು ಬೆಳಿಗ್ಗೆ ೧೦–೦೦ ಘಂಟೆಗೆ ಸೇರಲು ನಿಶ್ಚಯಿಂಪಿತಂ)